ಸಿಸಿ ನಂಃ 170/2025
ಸಿ.ಡಬ್ಲೂ 9/ಪಿ.ಡಬ್ಲೂ 5

**ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಸಿಜೆಎಂ ರವರ ನ್ಯಾಯಾಲಯ ಧಾರವಾಡ.**

**ಸಿಸಿ ನಂಃ 170/2025**

ಸಾಕ್ಷಿದಾರರ ಹೆಸರು ಃ ರೇಣುಕಾ ಹಂಚಿನಮನಿ
ಗಂಡನ ಹೆಸರು ಃ ರವಿ
ವಯಸ್ಸು ಃ 25 ವರ್ಷ
ಉದ್ಯೋಗ ಃ ಗೃಹಿಣಿ
ವಾಸ ಸ್ಥಳ ಃ ಕೇಲಗೇರಿ

ಸತ್ಯ ಪ್ರತಿಜ್ಞೆ ಮಾಡಿಸಲಾಯಿತು ಃ **22-11-2025**

**ಮುಖ್ಯ ವಿಚಾರಣೆ ಃ ಮಾನ್ಯ ಹಿಸಸಅ ರವರಿಂದ**

ಅಪಘಾತದಲ್ಲಿ ಮರಣ ಹೊಂದಿದ ರಮೇಶ ನನ್ನ ಮೈದುನ , ಮರೆವ್ವ ನನ್ನ ಅತ್ತೆ . ಪ್ರಣವ ಮತ್ತು ಪೃಥ್ವಿ ನನ್ನ ಮಕ್ಕಳು . ದಿಃ 20.10.2024 ರಂದು ಬೆಳಗ್ಗೆ ನಾನು ನನ್ನ ಮಕ್ಕಳಾದ ಪ್ರಣವ , ಪೃಥ್ವಿ ಮತ್ತು ಅತ್ತೆ ಮರೆವ್ವ ಇವರ ಜೊತೆ ನನ್ನ ಮೈದುನ ರಮೇಶ ನಮ್ಮ ರಿಕ್ಷಾ ನಂಃ ಕೆಎ-25/ಡಿ-3725 ನಲ್ಲಿ ಬ್ಯಾಡಗಿಗೆ ಹೋಗಲು ಧಾರವಾಡದ ರೈಲ್ವೆ ಸ್ಟೇಶನ್ ಗೆ ಹೊರಟಿದ್ದೆವು . ನಾವು ಸಂಪಿಗೆ ನಗರದ ಬಳಿ ಹೋಗುತ್ತಿರುವಾಗ ನಮ್ಮ ರಿಕ್ಷಾಕ್ಕೆ ಎದುರಾಗಿ ಜರ್ಮನ್ ಆಸ್ಪತ್ರೆ ಕಡೆಯಿಂದ ಒಂದು ಲಾರಿ ವೇಗವಾಗಿ ಬಂದು ನಮ್ಮ ರಿಕ್ಷಾಕ್ಕೆ ಗುದ್ದಿತು . ಪರಿಣಾಮ ನಮ್ಮ ರಿಕ್ಷಾ ಪಲ್ಟಿಯಾಯಿತು . ನನ್ನ ವೈದುನ ರಮೇಶ ಇವರ ತಲೆಯ ಮೇಲೆ ಲಾರಿಯ ಚಕ್ರ ಹರಿಯಿತು . ನನ್ನ ಅತ್ತೆ ಮರೆವ್ವ ಇವರಿಗೆ ತಲೆಗೆ ಪೆಟ್ಟಾಗಿ ಅವರು ಸ್ಥಳದಲ್ಲಿಯೇ ಮರಣ ಹೊಂದರು . ಅಪಘಾತದ ಪರಿಣಾಮ ನನ್ನ ತಲೆಗೆ , ಕಾಲಿಗೆ , ಎದೆಗೆ ಪೆಟ್ಟಾಯಿತು . ಪ್ರಣವ ಇವರ ಕೈ , ಕಾಲು ಮತ್ತು ನಡಕ್ಕೆ ಪೆಟ್ಟಾಗಿ ಅವನ ಬಲಗಾಲು ತುಂಡಾಯಿತು . ಪೃಥ್ವಿಗೆ ತಲೆಗೆ ಬಲವಾದ ಪೆಟ್ಟಾಯಿತು . ಅಪಘಾತಪಡಿಸಿದ ಟ್ರಕನ

ಸಿಸಿ ನಂ፥ 170/2025
ಸಿ.ಡಬ್ಲೂ 9/ಪಿ.ಡಬ್ಲೂ 5

ನಂಬರ ಜಿಎ-06/ಟಿ-9097 ಅಂತ ಇತ್ತು . ಲಾರಿ ಚಾಲಕನು ಅಲ್ಲಿಂದ ಪರಾರಿಯಾದನು . ಆಗ ಸದರಿ ವಿಷಯವನ್ನು ಚಾಸಾ-1 ರವರಿಗೆ ದೂರವಾಣಿಯಲ್ಲಿ ಮಾಹಿತಿ ನೀಡಿದೆವು . ನಂತರ ಅಂಬುಲೆನ್ಸ ತರಿಸಿ ಧಾರವಾಡದ ಸಿವಿಲ್ ಆಸ್ಪತ್ರೆಗೆ ಎಲ್ಲಾ ಗಾಯಾಳುಗಳನ್ನು ಮತ್ತು ಮೃತರ ಶವಗಳನ್ನು ತೆಗೆದುಕೊಂಡು ಹೋದೆವು . ಅಪಘಾತವಾದಾಗ ಸಮಯ ಬೆ፥ 4.45 ಗಂಟೆ ಆಗಿತ್ತು . ನನ್ನ ಮಗ ಪ್ರಣವ ಧಾರವಾಡದ ಸಿವಿಲ್ ಆಸ್ಪತ್ರೆಯಲ್ಲಿ ಮರಣ ಹೊಂದನು . ಈ ಬಗ್ಗೆ ಹುಬ್ಬಳ್ಳಿಯ ಕಿಮ್ಸ ಆಸ್ಪತ್ರೆಯಲ್ಲಿ ದಾಖಲಾಗಿರುವಾಗ ಹೇಳಿಕೆ ಕೊಟ್ಟಿದ್ದೆನೆ .

ದಿ፥ 21.10.2024 ರಂದು ನಾನು ಕಿಮ್ಸ ಆಸ್ಪತ್ರೆಯಲ್ಲಿದ್ದಾಗ ಪೊಲಿಸರು ಒಬ್ಬ ವ್ಯಕ್ತಿಯನ್ನು ಕರೆದುಕೊಂಡು ಬಂದು ತೊರಿಸಿ ಅತನ ಹೆಸರು ಉದ್ದಪ್ಪ ವಿಠಲ ಹೊಳೆಯನಕೊಪ್ಪ ಎಂದು ತಿಳಿಸಿದರು . ಆ ದಿನ ನೋಡಿ ಗುರುತಿಸಿದ ವ್ಯಕ್ತಿ ಈ ದಿನ ನ್ಯಾಯಾಲಯದ ಮುಂದೆ ಇರುವ ಆರೋಪಿಯಾಗಿರುತ್ತಾನೆ . ಈ ಕುರಿತು ಮರು ಹೇಳಿಕೆ ನೀಡಿದ್ದೆನೆ .

ದಿ፥ 28.10.2024 ರಂದು ನನ್ನ ಮಗ ಪೃಥ್ವಿ ಆಗಿರುವ ಗಾಯಗಳಿಂದ ಚೇತರಿಸಿಕೊಳ್ಳದೇ ಮೃತಪಟ್ಟನು . ಈ ಕುರಿತು ನಾನು ಮರು ಹೇಳಿಕೆ ನೀಡಿದ್ದೆನೆ .

**(ಮಾನ್ಯ ಹಿಸಸಅರವರು ಸಾಕ್ಷಿಯನ್ನು ಅಭಿಯೋಜನೆಗೆ ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಿದೆ)**

**ಪಾಟೀಸವಾಲು፥ ಮಾನ್ಯ ಹಿಸಸಅವರಿಂದ**

ನಾನು ಪೊಲಿಸರ ಮುಂದೆ ಹೇಳಿಕೆ ನೀಡುವಾಗ ಟ್ರಕ ಚಾಲಕನು ಜರ್ಮನ ಆಸ್ಪತ್ರೆ ಕಡೆಯಿಂದ ಕೇಲಗೇರಿ ಕಡೆ ತನ್ನ ಲಾರಿಯನ್ನು ಅತೀ ವೇಗವಾಗಿ ಮತ್ತು ಅಜಾರೂಕತೆಯಿಂದ

ಸಿಸಿ ನಂಃ 170/2025
ಸಿ.ಡಬ್ಲೂ 9/ಪಿ.ಡಬ್ಲೂ 5

ಚಲಾಯಿಸಿಕೊಂಡು ಬಂದು ಅಪಘಾತಪಡಿಸಿರುವುದಾಗಿ ಮತ್ತು ಸದರಿ ಅಪಘಾತವು ಆರೋಪಿಯ ತಪ್ಪಿನಿಂದ ಆಗಿದೆ ಎಂದು ಹೇಳಿಕೆ ಕೊಟ್ಟಿದ್ದೆನೆ ಎಂದರೆ ಸರಿ .

**ಪಾಟೀಸವಾಲುಃ ಆರೋಪಿ ಪರ ಶ್ರೀ ಸಿ ಪಿ ಎಂ ವಕೀಲರಿಂದ**

ನನಗೆ ಓದಲು ಮತ್ತು ಬರೆಯಲು ಬರುತ್ತದೆ . ಕೇಲಗೇರಿಯಿಂದ ಧಾರವಾಡದ ರೈಲ್ವೆ ನಿಲ್ದಾಣ ಎಷ್ಟು ಕಿ.ಮೀಟರ ಅಂತರದಲ್ಲಿದೆ ಎಂದು ಹೇಳಲು ಆಗುವುದಿಲ್ಲ . ಕೇಲಗೇರಿ - ಗೋವಾ ರಸ್ತೆಯು ಅಂದರೆ ಅಪಘಾತವಾದ ಸ್ಥಳದಲ್ಲಿ ಅಂದಾಜು 15 ಅಡಿ ಅಗಲ ಇದೆ ಎಂದರೆ ಸಾಕ್ಷಿಯು ಗೊತ್ತಿಲ್ಲ ಎಂದು ಹೇಳುತ್ತಾರೆ . ಅಪಘಾತವು ಆರೋಪಿಯ ತಪ್ಪಿನಿಂದ ಆಗಿಲ್ಲ ನಮ್ಮ ರಿಕ್ಷಾ ಚಾಲಕನ ತಪ್ಪಿನಿಂದ ಆಗಿದೆ ಎಂದರೆ ಸರಿಯಲ್ಲ . ನ್ಯಾಯಾಲಯದ ಮುಂದೆ ಇರುವ ಆರೋಪಿಯ ತಪ್ಪಿನಿಂದಲೇ ಅಪಘಾತವಾಗಿರುವುದಾಗಿ ಸುಳ್ಳು ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ . ದೂರನ್ನು ನಾವೇ ಕೊಟ್ಟಿದ್ದೆವೆ . ದೂರಿನ ಒಳಸಂಗತಿಗಳು ಗೊತ್ತು . ನ್ಯಾಯಾಲಯದ ಮುಂದೆ ಇರುವ ಆರೋಪಿಯೇ ಅಪಘಾತ ಮಾಡಿರುವುದಾಗಿ ನಾನು ಸುಳ್ಳು ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ . ನಾನು ಹೇಳಿದಂತೆ ಆರೋಪಿಯ ತಪ್ಪಿನಿಂದ ಅಪಘಾತ ಆಗಿಲ್ಲ ಎಂದರೆ ಸರಿಯಲ್ಲ .

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ,

ಪ್ರ ಹಿ ದಿ ನ್ಯಾ ಹಾಗೂ ಸಿಜೆಎಂ., ಧಾರವಾಡ.